ಕಾಣಿಸುವಂತೆ ತಿದ್ದಿದ ಕಣ್ಣು, ಹುಬ್ಬುಗಳು. ಸದಾ ಕೆಂಪು ದಿರಿಸಿನಲ್ಲಿರುವ ಕುಮಾರಿ ಕಂಡರೆ ಸಾಕು, ಧನ್ಯರಾದೆವೆಂದು ಜನ ತಲೆಬಾಗುತ್ತಾರೆ.

ಕುಮಾರಿಯರ ನಡವಳಿಕೆಗಳು ಖಚಿತ ನಿರ್ದೇಶನಕ್ಕೊಳಪಟ್ಟಿವೆ. ತಾಯ್ತಂದೆಯರ ಜೊತೆ ಇರುವ ಹಾಗಿಲ್ಲ. ಆಯ್ದ ನೇವಾರಿ ಮಕ್ಕಳೊಂದಿಗೆ, ಅದರಲ್ಲೂ ನೋಡಿಕೊಳ್ಳುವವರ ಮಕ್ಕಳೊಂದಿಗೆ ಮಾತ್ರ ಆಡಬಹುದು. ಕೆಂಪು ಬಟ್ಟೆಯನ್ನೇ ಧರಿಸಬೇಕು. ಮುಖ ಹೊರತೋರಿಸುವಾಗ ಹಣೆಯ ಮೇಲೆ ಅಗ್ನಿ ಚಕ್ಷು ಬರೆದಿರಬೇಕು. ತಲೆಗೂದಲು ಮೇಲೆತ್ತಿ ತುರುಬು ಕಟ್ಟಿರಬೇಕು. ರಾಜನಿರಲಿ, ಪ್ರಧಾನಿ–ರಾಷ್ಟ್ರಪತಿಯಿರಲಿ, ಬಂದವರೆಲ್ಲ ನಮಿಸಿ, ಕಾಲಿಗೆ ಮುತ್ತಿಡುವುದರಿಂದ ಅವರಿಗೆ ಅನುವಾಗುವಂತೆ ಕಾಲು ಚಾಚಿಯೇ ಕೂರಬೇಕು. ಬಜಾರಿನಲ್ಲಿ, ಊರಿನಲ್ಲಿ ಬೇಕಾದಂತೆ ಓಡಾಡುವಂತಿಲ್ಲ. ಚಪ್ಪಲಿ ಹಾಕುವಂತಿಲ್ಲ. ಕಾಲು ನೆಲಕ್ಕೆ ತಗಲುವಂತಿಲ್ಲ. ಮನೆಯಿಂದ ಹೊರಗೆ ಆಯ್ದ ದಿನಗಳಲ್ಲಿ ವರ್ಷಕ್ಕೆ ಹದಿಮೂರು ಸಲ ಮಾತ್ರ ಬರಬಹುದು. ಆಗವಳನ್ನು ಹೊತ್ತು ತರಲಾಗುತ್ತದೆ. ವರ್ಷಕ್ಕೊಮ್ಮೆ ನಡೆಯುವ ಕುಮಾರಿ ಉತ್ಸವದಂದು ಸಾವಿರಾರು ಜನ ದರ್ಶನ ಪಡೆಯಲು ಹಾತೊರೆದು ಮುತ್ತುವಾಗ ಮೌನವಾಗಿ, ಗಂಭೀರವಾಗಿ, ಶಾಂತವಾಗಿ ರಥದಲ್ಲಿ ಕೂತಿರಬೇಕು.

ಕುಮಾರಿಯ ಪ್ರತಿ ನಡವಳಿಕೆಗೂ ಅರ್ಥವಿದೆ. ಬಂದವರೆದುರು ನಕ್ಕರೆ ಅಥವಾ ಅತ್ತರೆ ಗಂಭೀರ ಕಾಯಿಲೆ ಅಥವಾ ಸಾವನ್ನು ಸೂಚಿಸುತ್ತದೆ. ಕಣ್ಣುಜ್ಜಿದರೆ ಸದ್ಯದಲ್ಲೇ ಯಾರದೋ ಸಾವು; ಹರಕೆಯೊಪ್ಪಿಸಿದ ತಿನಿಸನ್ನು ಹೆಕ್ಕಿದರೆ ವ್ಯವಹಾರ ನಷ್ಟ; ಚಪ್ಪಾಳೆ ತಟ್ಟಿದರೆ ರಾಜನ ಭಯ ಎಂದರ್ಥ.

ಅಂದು ಮಧ್ಯಾಹ್ನ ನಾವಲ್ಲಿದ್ದೆವು. ಕುಮಾರಿಯ ಫೋಟೊ ತೆಗೆಯಲೇಬಾರದು ಎಂಬ ನಿಖರ ಸೂಚನೆಯಿತ್ತು. ಯಾರಾದರೂ ಬಂದು ಕರೆದರೆ ಕಿಟಕಿಗೆ ಬರುವುದಿದೆಯಂತೆ. ನಮ್ಮ ಗೈಡ್ ಕಟಕ್ ಲಾಮಾ ಕೆಳಗಿನಿಂದ ಕರೆದರು: ‘ಬುವಾ, ದಯವಿಟ್ಟು ದರ್ಶನ ನೀಡುವಿರಾ?’.

ಐದು ವರ್ಷದ ಮಗು ಊಟ ಮಾಡುತ್ತಿತ್ತು. ಸಂಜೆ ನಾಲ್ಕರ ನಂತರ ಬರಬೇಕೆಂದು ಮೇಲಿನಿಂದ ಉತ್ತರ ಬಂತು.


## ‘ಬತ್ತೀಸ’ ಗುಣ

ನೇಪಾಳದಲ್ಲಿ ಶಾಕ್ತ ಆರಾಧಕರು ಹೆಚ್ಚಿದ್ದಾರೆ. ಅವರ ಮುಖ್ಯಗ್ರಂಥ ‘ದೇವಿಪುರಾಣ’. ಅದರಲ್ಲಿ ದೇವಿಯು ತಾನು ಅಂಶರೂಪವಾಗಿ ಎಲ್ಲ ಹೆಣ್ಣುಗಳಲ್ಲೂ ಇರುವುದಾಗಿ ಹೇಳಿದ ಆಧಾರದ ಮೇಲೆ ಕುಮಾರಿ ಪೂಜೆ ನಡೆಯುತ್ತದೆ. ಜೊತೆಗೆ ಹಲವಾರು ಐತಿಹ್ಯಗಳೂ ಚಾಲ್ತಿಯಲ್ಲಿವೆ. ಒಂದು ಐತಿಹ್ಯದಂತೆ: ಮಲ್ಲ ರಾಜನೊಬ್ಬ ದುರ್ಗಾದೇವಿಯ (ತಲೆಜು) ಪರಮಭಕ್ತನಾಗಿದ್ದ. ಅವಳು ಪ್ರತಿದಿನ ರಾತ್ರಿ ಪ್ರತ್ಯಕ್ಷವಾಗಿ ಅವನೊಡನೆ ಪಗಡೆ ಆಡುತ್ತಿದ್ದಳು. ಆದರೆ ಅದನ್ನು ಯಾರಿಗೂ ತಿಳಿಸಬಾರದೆಂಬ ಷರತ್ತು ಹಾಕಿದ್ದಳು. (ದೇವರಿಗೂ ಮನುಷ್ಯರೊಡನೆ ಒಡನಾಡುವ ಮೋಹ!) ಒಮ್ಮೆ ರಾಣಿಗೆ ರಾಜನ ಮೇಲೆ ಅನುಮಾನ ಬಂದು ಹಿಂಬಾಲಿಸಿ ದೇವಿಯನ್ನು ನೋಡಿಬಿಟ್ಟಳು. ದೇವಿ ಕೋಪಬಂದು ಹೊರಟುನಿಂತಳು. ಬಿಟ್ಟು ಹೋಗದಂತೆ ಪರಿಪರಿಯಾಗಿ ರಾಜ ಬೇಡಿಕೊಂಡಾಗ ಇನ್ನುಮುಂದೆ ಶಾಕ್ಯ–ಬಜ್ರಾಚಾರ್ಯ ಕುಲದ ಕುಮಾರಿಯ ದೇಹದಲ್ಲಿ ತಾನು ನೆಲೆಸುವುದಾಗಿಯೂ, ಅವಳನ್ನು ಹುಡುಕಿ ತಂದು ಪೂಜಿಸಬೇಕೆಂದೂ ತಿಳಿಸುತ್ತಾಳೆ.

ದೇವಿ ನೆಲೆಸಬಹುದಾದ ಕುಮಾರಿಯನ್ನು ಆರಿಸುವುದೊಂದು ದೀರ್ಘ ಪ್ರಕ್ರಿಯೆ. ನೇವಾರಿ ಕುಲದ ಶಾಕ್ಯ ಅಥವಾ ಬಜ್ರಾಚಾರ್ಯ ಹೆಣ್ಣುಮಕ್ಕಳಷ್ಟೇ ಅದಕ್ಕೆ ಆಯ್ಕೆಯಾಗುವವರು. ಶಾಕ್ಯರು ಬೌದ್ಧರು, ಅದು ಬುದ್ಧನ ಜನ್ಮಕುಲ. ಕುಮಾರಿಯಾಗಿ ಆಯ್ಕೆಯಾಗುವುದು ಬಲು ಹೆಮ್ಮೆಯ, ಪವಿತ್ರ ವಿಷಯ. ಹಾಗಾಗಿ ತಮ್ಮ ಮಗಳನ್ನು ಕುಮಾರಿಯನ್ನಾಗಿಸಲು ತಂದೆತಾಯಿಯರು ಪೈಪೋಟಿ ನಡೆಸುತ್ತಾರೆ. ಕುಮಾರಿಯ ಹುಡುಕಾಟ ಶುರುವಾಗಿದೆಯೆಂದು ತಿಳಿದದ್ದೇ ಪಾಲಕರು ತಮ್ಮ ಹೆಣ್ಣುಮಕ್ಕಳ ಜಾತಕ ಸಲ್ಲಿಸುತ್ತಾರೆ.

ಈ ಮೊದಲೇ ಆಗಿಹೋದ ಕುಮಾರಿ ಕುಟುಂಬಗಳಲ್ಲಿ ಹುಡುಗಿಯರಿದ್ದರೆ ಜಾತಕ ಕೇಳಿ ಪಡೆಯುವುದೂ ಇದೆ. ಕನಸಿನಲ್ಲಿ ಕೆಂಪು ಸರ್ಪ ಕಂಡ ಶಾಕ್ಯ–ಬಜ್ರಾಚಾರ್ಯ ಬಸುರಿ ಹೆಂಗಸಿಗೆ ಹುಟ್ಟುವ ಮಗು ಕುಮಾರಿ ಆಗಲು ಯೋಗ್ಯವೆಂಬ ನಂಬಿಕೆಯೂ ಇದೆ. ರಾಜರ ಕುಮಾರಿಯಾಗಲು ಮೊದಲೆಲ್ಲ ರಾಜರ ಜಾತಕದೊಂದಿಗೆ ಅವಳದೂ ತಾಳೆಯಾಗುವುದು ಅವಶ್ಯವಿತ್ತು. ಅವಳ ಮನೆಯವರೂ ರಾಜನಿಷ್ಠರಾಗಿರಬೇಕಿತ್ತು. ಕುಮಾರಿಯರ ಆಯ್ಕೆಯನ್ನು ಐದು ಬಜ್ರಾಚಾರ್ಯ ಬೌದ್ಧ ಭಿಕ್ಖುಗಳು, ರಾಜಪುರೋಹಿತರು, ದುರ್ಗಾದೇವಿಯ ಮುಖ್ಯ ಪುರೋಹಿತರು ಮಾಡುತ್ತಿದ್ದರು. ರಾಣಿ ಮತ್ತು ಅಂತಃಪುರ ಪರಿವಾರದವರು ಹುಡುಗಿಯ ಪರೀಕ್ಷೆ ಮಾಡುತ್ತಿದ್ದರು. ಈಗ ಮುಖ್ಯ ಪುರೋಹಿತರ ಪತ್ನಿ ಮತ್ತಿತರರು ಪರೀಕ್ಷಿಸುತ್ತಾರೆ.

ಆಯ್ಕೆಯು ಇಪ್ಪತ್ತೊಂದು ದಿನದ ಪ್ರಕ್ರಿಯೆ. ಮೂವರು ಅಂತಿಮ ಹಂತಕ್ಕೆ ಆಯ್ಕೆಯಾಗುತ್ತಾರೆ. ಕುಮಾರಿಯಾಗಲು ಮೂವತ್ತೆರಡು ಗುಣ ಕೂಡಿ ಬರಬೇಕು. ಹುಡುಗಿಯರ ಮೈಮೇಲೆ ಒಂದೂ ಕಲೆಯಿರಬಾರದು. ಎಲ್ಲ ಹಲ್ಲೂ ಇರಬೇಕು. ಉತ್ತಮ ಆರೋಗ್ಯವಿರಬೇಕು.ಶಂಖದಂತಹ ಕುತ್ತಿಗೆ, ಆಲದ ಮರದಂತೆ ದೇಹ, ಗೋವಿನಂತೆ ಕಣ್ಣುರೆಪ್ಪೆ, ಬಾತುವಿನಂತೆ ಮೃದುವಾದ ಆದರೆ ಸ್ಪಷ್ಟವಾದ ಧ್ವನಿಯಿರಬೇಕು. ಕೂದಲು ಮತ್ತು ಕಣ್ಣೆಪ್ಪೆ ಕಪ್ಪಾಗಿರಬೇಕು. ಕೋಮಲ ಹಸ್ತಗಳಿರಬೇಕು. ಅವಳ ಧೈರ್ಯ ಪರೀಕ್ಷಿಸಲು ಕೈಯಲ್ಲಿ ಧಾನ್ಯ ಹಿಡಿದು ನಿಲ್ಲಲು ಹೇಳಿದಾಗ ಅಳದೆ, ಚೆಲ್ಲದೆ, ಬೇಸರಿಸದೆ ನಿಲ್ಲಬೇಕು, ಮುಖ ಕೆಂಪಾಗಬೇಕು. ಕೊನೆಗೆ ದುರ್ಗಾಪೂಜೆಯ ಕಾಳರಾತ್ರಿಯ ದಿನ, ದೇವಿಗೆ ಕಡಿದ ನೂರಾಎಂಟು ಎಮ್ಮೆ, ಕುರಿಗಳ ತಲೆಯ ನಡುವೆ, ವೇಷದ ಮುಖವಾಡಗಳ ನಡುವೆ ಹೆದರದೆ ಇರಬೇಕು!



ಅಲ್ಲೇ ಒಂದು ರಾತ್ರಿ ನಿದ್ರಿಸಿ ಕಳೆಯಬೇಕು! ಇಷ್ಟೆಲ್ಲ ಪರೀಕ್ಷೆಯಲ್ಲಿ ತೇರ್ಗಡೆಯಾದ ಒಬ್ಬಳು ಕುಮಾರಿಯಾಗಿ ಆಯ್ಕೆಯಾಗುತ್ತಾಳೆ. ಪ್ರಾರ್ಥನೆ, ಪೂಜೆ, ತಾಂತ್ರಿಕ ಆಚರಣೆಗಳ ಬಳಿಕ ದೇವಿ ಆವಾಹನೆಯಾಗುವಳೆಂಬ ನಂಬಿಕೆಯಿದೆ.

ಋತುಮತಿಯಾಗುವವರೆಗೆ ಅವಳು ದೇವಿಯ ವೇಷ ಧರಿಸಬೇಕು. ನಂತರ ಬ್ರಹ್ಮಚಾರಿಣಿಯಾಗಿ ಪವಿತ್ರ ಜೀವನ ನಡೆಸಬೇಕು. ಪ್ರತಿಯಾಗಿ ಸರ್ಕಾರ ಸಣ್ಣ ಮೊತ್ತದ ಮಾಸಿಕ ಗೌರವಧನ ಕೊಡುತ್ತದೆ.

## ಮಿಕ್ಕು ಮೀರಿ ಹೋದವರು

ಕುಮಾರಿಯನ್ನು ಆರಾಧಿಸುವ ಲಕ್ಷಾಂತರ ಜನರಿರುವಂತೆ ವಿರೋಧಿಸುವವರೂ ಇದ್ದಾರೆ. ನೇಪಾಳಿ ಮಹಿಳಾ ಪುನರ್ವಸತಿ ಕೇಂದ್ರದ ಕಾರ್ಯಕರ್ತೆಯರು ಈ ಪದ್ಧತಿಯನ್ನು ವಿರೋಧಿಸಿದರು. ನೇಪಾಳವು ಪ್ರಜಾಪ್ರಭುತ್ವ ದೇಶವಾದಮೇಲೂಅದುಮುಂದುವರೆಯುವುದು ಸಲ್ಲದೆಂದು ಅವರ ವಾದ. ಆದರೆ ಮಾಜಿ ಕುಮಾರಿ ಮತೀನಾ ಶಾಕ್ಯಳ ತಂದೆಯೂ ಸೇರಿದಂತೆ ಹಲವರು, ‘ಅದು ನೇಪಾಳದ ಸಾಂಸ್ಕೃತಿಕ ಅಸ್ಮಿತೆ. ಸರ್ಕಾರಗಳು ಮುಂದುವರೆಸಬೇಕು’ ಎಂದು ಪಟ್ಟು ಹಿಡಿದರು. ಪ್ರಕರಣ ನೇಪಾಳದ ಸರ್ವೋಚ್ಚ ನ್ಯಾಯಾಲಯದವರೆಗೂ ಹೋಯಿತು. ಕುಮಾರಿಯರ ನೇಮಕವು ‘ಬಾಲಕಾರ್ಮಿಕ’ ಪದ್ಧತಿಯಾಗುವುದಿಲ್ಲ; ಅದು ಹುಡುಗಿಯ ಸ್ವಾತಂತ್ರ್ಯಕ್ಕೆ ಅಡ್ಡಿ ತರುವುದಿಲ್ಲ ಎಂದು ನ್ಯಾಯಾಲಯ ಹೇಳಿತು. ಕುಮಾರಿಯರ ಶಿಕ್ಷಣ ಹಕ್ಕು ಆಧಾರದ ಮೇಲೆ ಸಂಘಸಂಸ್ಥೆಗಳು ನ್ಯಾಯಾಲಯಕ್ಕೆ ಹೋದವು.